# ವಿಟ್ಲ ಗ್ರಾಮೀಣ ಸಹಕಾರಿ ಬ್ಯಾಂಕ್ ನಿಯಮಿತ

**ನಂ. ಎಫ್, ಎಫ್, 94 ದ.ಕ. ಅಂಚೆ: ವಿಟ್ಲ, ಬಂಟ್ವಾಳ ತಾಲೂಕು 574243**

**ದೂರವಾಣಿ ನಂ : 08255-239155 , 239515**

ದಿನಾಂಕ: 18-01-2016

**ಗುಮಾಸ್ತ ಹುದ್ದೆಯ ನೇಮಕಾತಿ ಕುರಿತು ಜಾಹೀರಾತು**

ಬ್ಯಾಂಕಿನಲ್ಲಿ ಪ್ರಸ್ತುತ ಖಾಲಿ ಇರುವ ನಾಲ್ಕು ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳನ್ನು ಸ್ಪರ್ದಾತ್ಮಕ ಲಿಖಿತ ಪರೀಕ್ಷೆ ಹಾಗೂ ಮೌಖಿಕ ಪರೀಕ್ಷೆ ಮೂಲಕ ನೇಮಕಾತಿಯಿಂದ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ವಿದ್ಯಾರ್ಹತೆ :**

**ದ್ವಿತೀಯ ದರ್ಜೆ ಗುಮಾಸ್ತ:** ಭಾರತದ ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದಿಂದ ಕನಿಷ್ಠ ಶೇಕಡಾ 50 ಅಂಕಗಳೊಂದಿಗೆ ಪದವಿಯನ್ನು ಪಡೆದಿರಬೇಕು. ಬಿ,ಕಾಂ. , ಬಿ.ಬಿ.ಯಂ, ಅಥವಾ ತತ್ಸಮಾನದ ಪದವಿಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಹೊರತು ಪಡಿಸಿ ಉಳಿದ ಅಭ್ಯರ್ಥಿಗಳು ಸಹಕಾರಿ ತರಬೇತಿಯನ್ನು ಕಡ್ಡಾಯವಾಗಿ ಪಡೆದಿರತಕ್ಕದ್ದು. ಹಾಗೂ ಕಂಪ್ಯೂಟರ್ ಬಗ್ಗೆ ಕನಿಷ್ಟ ಆರು ತಿಂಗಳ ತರಬೇತಿ ಹೊಂದಿರತಕ್ಕದ್ದು.

**ಅರ್ಹತಾ ಷರತ್ತುಗಳು:** ಭಾರತೀಯ ನಾಗರೀಕನಾಗಿರತಕ್ಕದ್ದು, ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು.

**ವೇತನ ಶ್ರೇಣಿ: ಹಾಗೂ ಹುದ್ದೆ**

| ಕ್ರ ಸಂ | ಹುದ್ದೆಯ ಹೆಸರು | ವೇತನ ಶ್ರೇಣಿ | ಹುದ್ದೆಯ ಸಂಖ್ಯೆ | ವರ್ಗ | ವಿದ್ಯಾರ್ಹತೆ |
|---|---|---|---|---|---|
| 1 | ದ್ವಿತೀಯ ದರ್ಜೆ ಗುಮಾಸ್ತ | 11600-200-12000-250-13000-300-14200-350-15600-400-17200-450-19000-500-21000 | 4 | ಸಾಮಾನ್ಯ | ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ |

**ವಯೋಮಿತಿ:** ಈ ಪ್ರಕಟಣೆಯ ದಿನಾಂಕಕ್ಕೆ ಸರಿಯಾಗಿ ಅಭ್ಯರ್ಥಿಯ ಗರಿಷ್ಠ ವಯೋಮಿತಿಯು ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡಕ್ಕೆ ಸೇರಿದವರಾಗಿದ್ದರೆ 40 ವರ್ಷ . ಇತರೆ ಹಿಂದುಳಿದ ಜಾತಿ ಮತ್ತು ವರ್ಗಗಳಿಗೆ 38 ವರ್ಷ ಹಾಗೂ ಇತರರು 35 ವರ್ಷ ಮೀರಿರಬಾರದು. ಜಾತಿ ಮೀಸಲಾತಿ ಮತ್ತು ಪ್ರವರ್ಗ ಮೀಸಲಾತಿ ಬಗ್ಗೆ ಸೂಕ್ತ ಪ್ರಮಾಣ ಪತ್ರಗಳನ್ನು ಹಾಜರುಪಡಿಸತಕ್ಕದ್ದು.

**ಅರ್ಜಿ ಶುಲ್ಕ:** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಾಗೂ ಪ್ರವರ್ಗ1 ಕ್ಕೆ ರೂ 100.00 , ಉಳಿದ ಎಲ್ಲಾ ಅಭ್ಯರ್ಥಿಗಳು ರೂ 200.00 ಅರ್ಜಿ ಶುಲ್ಕವನ್ನು ಯಾವುದೇ ರಾಷ್ಟ್ರೀಕೃತ ಇಲ್ಲವೇ ಶೆಡ್ಯೂಲ್ಡ್ ಬ್ಯಾಂಕಿನಿಂದ "ಮುಖ್ಯಕಾರ್ಯನಿರ್ವಾಹಕರು, ವಿಟ್ಲ ಗ್ರಾಮೀಣ ಸಹಕಾರಿ ಬ್ಯಾಂಕ್" ಎಂಬ ಹೆಸರಿಗೆ ಡಿ.ಡಿ ಪಡೆದು ಪಾವತಿಸಬೇಕು. ಒಮ್ಮೆ ಸಲ್ಲಿಸಿದ ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸುವುದಾಗುವುದಿಲ್ಲ ಅಲ್ಲದೆ ಬೇರೆ ಯಾವುದೇ ವ್ಯವಹಾರಕ್ಕೂ ಬಳಸಿಕೊಳ್ಳಲಾಗುವುದಿಲ್ಲ

**ಅರ್ಜಿ ಸಲ್ಲಿಸುವ ವಿಧಾನ**

ಅರ್ಜಿಯನ್ನು ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ http://vgsbankvittal.co.in/application.html ನಲ್ಲಿ ಹಾಕಲಾದ ಅರ್ಜಿಫಾರಂನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಭಾವಚಿತ್ರದೊಂದಿಗೆ ಭರ್ತಿಗೊಳಿಸುವುದು. ಅರ್ಜಿಯೊಂದಿಗೆ ಅರ್ಜಿ ಶುಲ್ಕ ಹಾಗೂ ಎಸ್‌ಎಸ್‌ಎಲ್‌ಸಿ , ಪದವಿ ಪ್ರಮಾಣ ಪತ್ರ ಮತ್ತು ದೃಡೀಕೃತ ಅಂಕಪಟ್ಟಿಗಳು ಹಾಗೂ ಇತರ ಪ್ರಮಾಣ ಪತ್ರಗಳ ಪ್ರತಿಯನ್ನು ಹಾಗೂ ಒಂದು ಹೆಚ್ಚುವರಿ ಭಾವಚಿತ್ರವನ್ನು ಲಗ್ತಿಕರಿಸತಕ್ಕದ್ದು. ಭರ್ತಿಮಾಡಿದ ಅರ್ಜಿಯನ್ನು ದಿನಾಂಕ 06-02-2016 ಶನಿವಾರದ ಒಳಗೆ ಮುಖ್ಯಕಾರ್ಯನಿರ್ವಾಹಕರು ವಿಟ್ಲ ಗ್ರಾಮೀಣ ಸಹಕಾರಿ ಬ್ಯಾಂಕು , ವಿಟ್ಲ ಇವರಿಗೆ ತಲುಪಿಸತಕ್ಕದು.

**ಲಿಖಿತ ಪರೀಕ್ಷೆ ವಿಧಾನ:** ಲಿಖಿತ ಪರೀಕ್ಷೆಗೆ ಆರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ದಿನಾಂಕವನ್ನು ತಿಳಿಸಲಾಗುವುದು. ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾಗಿದಲ್ಲಿ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರನ್ನು ಕಚೇರಿ ಸಮಯದಲ್ಲಿ ದೂರವಾಣಿ ಮುಖೇನ ಇಲ್ಲವೇ ನೇರವಾಗಿ ಸಂಪರ್ಕಿಸಬಹುದು.

**ವಿ.ಸೂ: ದಕ್ಷಿಣ ಕನ್ನಡ ಜಿಲ್ಲೆಯ ಅಭ್ಯರ್ಥಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುವುದು. ನೇಮಕಾತಿ ಹೊಂದಿದ ಅಭ್ಯರ್ಥಿಯು ಕನಿಷ್ಟ ಎರಡು ವರ್ಷಗಳ ಕಾಲ ಕಡ್ಡಾಯವಾಗಿ ಸೇವೆ ಸಲ್ಲಿಸತಕ್ಕದ್ದು.**

**ಮುಖ್ಯಕಾರ್ಯನಿರ್ವಾಹಕರು**